'ಅದು ನೆನಸಬಾಡಲೇ...'

ಕೆಂಚ ಈ ಮನಿಗೆ ದುಡಿಯಲು ಬಂದಾಗ ಎಂಟು ವರ್ಷ. ಕೆಂಚನ ಅಪ್ಪ ಕರೆಪ್ಪ ಗೌಡರ ಹತ್ತಿರ ಬಂದು 'ಯಪ್ಪೋ... ಇವನ್ನ ನಿಮ್ಮ ಉಡ್ಯಾಗ ಹಾಕುತಿನಿ. ತಾಯಿ ಇಲ್ಲದ ಮಗ. ನನ್ನ ಕೈಯಲ್ಲಂತೂ ದುಡ್ಯಾಕಾಗದಿಲ್ಲ. ಇವತ್ತೋ ನಾಳೆ ಕುಣ್ಯಾಗ ಹೋತೀನಿ. ನಿಮ್ಮನ್ಯಾಗ ಕೂಳು ತಿನಕಂಡ ದೊಡ್ಡವನಾಗಲಪೋ. ನೀವೇ ಸಲುವುಬೇಕಪೋ...' ಅಂತ ಬಿಟ್ಟು ಹೋಗಿದ್ದ. ಆಗ ಗೌಡರಿಗೆ ಇಪ್ಪತ್ತನಾಲ್ಕು ವರ್ಷ. ಮದುವಿ ಆಗಿ ಮೂರು ವರ್ಷ ಆಗಿತ್ತು. ತಂದೆ ಮಲ್ಕನಗೌಡ, ತಾಯಿ ಶಿವಮ್ಮಗ ವಯಸ್ಸಾಗಿ ಹಾಸಿಗಿ ಹಿಡಿದಿದ್ದರು. ಇಬ್ಬರಿಗೂ ಮಣಕಾಲು ಬೇನೆ. ಯಾವ ವೈದ್ಯರ ಹತ್ತಿರ ತೋರಿಸಿದರೂ 'ಮಣಕಾಲು ಚಿಪ್ಪು ಹೋಗಿವೆ. ಆಪರೇಸನ್ ಮಾಡಿ ಹೊಸ ಮೊಣಕಾಲು ಚಿಪ್ಪು ಹಾಕಿಸಬೇಕು. ಆ ನಂತರ ಬ್ಯಾನೆ ಕಡಿಮಿ ಆಗಬಹುದು ಆಗದೇ ಇರಬಹುದು' ಎಂದು ಹೇಳುತಿದ್ದರು. ಗೌಡರಿಗೆ ಆಪರೇಸನ್ ಮಾಡಸಲಿ ಅಂತ ಆಸೆ ಇತ್ತು. ಆದರೆ ತಂದೆ ತಾಯಿ ಒಪ್ಪಲಿಲ್ಲ. 'ಇನ್ನೇನು ಸಾಯೋ ವಯಸ್ಸು ಆಗಿದೆ. ಇನ್ನು ಯಾವ ಸುಖಕ್ಕ ಕಾಲು ಕೊಯ್ಸಿಸಗೆಬೇಕು. ಆದದ್ದು ಆಗಲಿ ಅನುಭವಿಸಿ ಹೋತೀವಿ' ಎಂದು ಆಪರೇಸನ್ ಮಾಡಿಸಿಕೊಳ್ಳಲು ನಿರಾಕರಿಸಿದ್ದರು.

ಕೆಂಚ ಮನೆಯಲ್ಲಿ ಕಸ ಬಳೇದು, ಮುಸುರೆ ತಿಕ್ಕೋದು, ಹಾಸಿಗಿ ಹಾಸೋದು ತೆಗಿಯೋದು, ಬಟ್ಟೆ ಒಗಿಯೋದು ಮಾಡುತಿದ್ದ. ಬಹಳ ಚುರುಕಿದ್ದ. ಹೇಳಿಸಿಕೊಳ್ಳಲಾರದಂಗ ಕೆಲಸ ಮಾಡಿ ಮುಗಿಸುತಿದ್ದ. ಇದರಿಂದ ಮನಿಗೆ ಬೇಗ ಹೊಂದಿಕೊಂಡ. ಗೌರಮ್ಮ ಗೌಡಸಾನಿಗೆ ಮೂರು ನಾಲ್ಕು ವರ್ಷಾದರೂ ಮಕ್ಕಳಾಗಲಿಲ್ಲ. ಅದೊಂದು ಮನಸಲ್ಲಿ ದೊಡ್ಡ ಕೊರಗಿತ್ತು. ಇನ್ನೊಂದು ಮದುವೆಯಾಗಲು ತಂದೆ ತಾಯಿ ಒತ್ತಾಯ ಮಾಡಿದರೂ ಗೌಡರು ಒಪ್ಪಲಿಲ್ಲ. ಯಾಕಂದರ ಗೌರಮ್ಮನಿಗೆ ಮಕ್ಕಳಾಗಲಿಲ್ಲ ಅನ್ನೋದು ಬಿಟ್ಟರೆ, ಆಕಿನೇ ಒಂದು ಮಗುವಾಗಿ ಮನೇಲಿ ಇದ್ದಳು. ತಂಗಾಳಿಯಂತೆ ಓಡಾಡುತಿದ್ದಳು. ಅತ್ತಿ ಮಾವನಂತೂ ಸ್ವಂತ ಹೊಟ್ಟೆಲಿ ಹುಟ್ಟಿದವರಂತೆ ಜೋಪಾನ ಮಾಡುತ್ತಿದ್ದಳು. ಬೆಳದಿಂಗಳೇ ಮನೇಲಿ ಇದ್ದಂತೆ ಗೌರಮ್ಮ ಇದ್ದಳು. ಕೆಂಚನನ್ನು ಸ್ವಂತ ತಮ್ಮನಂತೆ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದಳು. ಕೆಂಚನಿಗೆ ತಾಯಿಯೇ ಆಗಿದ್ದಳು. ಕೆಂಚ ಕೆಲಸ ಅಚ್ಚುಕಟ್ಟಾಗಿ ಮಾಡುತ್ತಿದ್ದರಿಂದ, ಸದಾ ಮನೇಲೇ ಇರುತ್ತಿದ್ದರಿಂದ ಮನೆಗೆ ಅನಿವಾರ್ಯನಾಗುತ್ತಾ ಹೋದ. ಅವನಿಲ್ಲದೆ ಗೌರಮ್ಮನಿಗೆ ಕೈಕಾಲು ಆಡದಂಗ ಆಗಿತ್ತು. ಕುಂತರೂ ನಿಂತರೂ ಗೌರಮ್ಮ 'ಲೋ ಕೆಂಚ...' ಅಂದರೆ ಅವನು 'ಯಮ್ಮಂಗೆ...' ಅನಬೇಕು.

ನಾಲ್ಕಾರು ವರ್ಷಗಳಲ್ಲಿ ಗೌರಮ್ಮನಿಗೆ ಗಂಡು ಮಗುವಾಯಿತು. ಗೌಡ ಮಗ ಹುಟ್ಟಿದನಂತ ಊರು ಮಂದಿಗೆ ಊಟ ಹಾಕಿಸಿದ. 'ಇನ್ನೂ ನಮ್ಮ ಜೀವನ ಮುಗೀತು. ಮಮ್ಮಗನ ನೋಡಬೇಕಂತ ಆಸೆ ಇತ್ತು. ಅದೊಂದು ದೇವರು ಈಡೇರಿಸಿದ. ನಾವು ಶಿವನ ಪಾದ ಸೇರುತೀವಿ' ಅಂದು ಒಂದೆರಡು ವರ್ಷದಲ್ಲಿ ಗೌಡನ ತಂದೆ ತಾಯಿ ತೀರಿಕೊಂಡರು. ಸ್ವಲ್ಪ ದಿನ ಮನಿಗೆ ಕತ್ತಲು ಕವಿದಂತಾಯಿತು. ಗೌರಮ್ಮ ಗೌಡಸಾನಿ ಎಲ್ಲಾ ಹಿರಿಯರನ ಕೇಳಿ ಮಾಡುತಿದ್ದರಿಂದ ಕಣ್ಣು ಕಳಕೊಂಡಾಯಿತು. ಆಗ ಆಸರಕ್ಕಿದ್ದವನು ಕೆಂಚ. 'ಲೋ ಕೆಂಚ... ನೀನರ ನಮ್ಮ ಜಾತ್ಯಾಗ ಹುಟ್ಟಿದ್ದರ ಗೌಡರ ಹುಡಿಗಿನ್ನ ಮದುವಿ ಮಾಡಿ ನಮ್ಮನ್ಯಾಗ ಇಟಗಂತಿದ್ಯಾ' ಎನ್ನುತ್ತಳು. 'ಯಮ್ಮಂಗೆ... ನನಗ ಯಾ ಮದುವಿ ಬ್ಯಾಡಂಗೆ ಇರೋಷ್ಟು ದಿವಸ ನಿಮ್ಮನ್ಯಾಗಿದ್ದು ಸತ್ತೋತಿನಂಗೆ' ಅಂತಿದ್ದ. 'ಲೇ... ಖೋಡಿ ಅಂಗ ಅನಬಾರದಲೇ ಮದುವಿ ಮಾಡಿಕಂಡು ಚೆಂದಾಗಿ ಸಂಸಾರ ಮಾಡಬೇಕು. ನೀ ಮದುವಿ ಮಾಡಿಕಂಡು ನಮ್ಮನಲೇ ಇರುವಂತಿಗಿ.' 'ಅಂಗಲಮ್ಮೋ... ಬಂದಾಕಿ ನನ್ನಂಗ ಮನಿಗಿ ನಿಯತ್ತಿನಿಂದ ಇರಬೇಕಲಂಗೆ.' 'ಅದೆಲ್ಲಾ ಈಗ್ಯಾಕ ಚಿಂತಿ ಮಾಡ್ತಲೇ' ಎಂದು ಮದುವೆ ಮಾಡಿಕೊಳ್ಳಲು ಒತ್ತಾಯ ಮಾಡಿದ್ದಳು. 'ಅದೊಂದು ಸುದ್ದಿ ಬ್ಯಾಡಂಗೆ. ನನಗ ಮನೆ ಮಠ ಏನು ಇಲ್ಲ. ನೀನೇ ನಮ್ಮವ್ವ